**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು.**

**ಎಸ್ ಸಿ ಕೇಸ್ ನಂ. 258/2023**

| | | |
|---|---|---|
| ಸಾಕ್ಷಿದಾರರ ಹೆಸರು | ಅಭಿಜಿತ್ ಡಿ ಎಸ್ | ಫ್ರಾಸಾ –17 ಚಾಸಾ – 25 |
| ತಂದೆಯ ಹೆಸರು | ಸ್ವಾಮಿ | |
| ವಯಸ್ಸು | 29 ವರ್ಷ | ಪ್ರಮಾಣ ವಚನ ಮಾಡಿದ ದಿನಾಂಕ.01.02.2025 |
| ವೃತ್ತಿ | ಸಿವಿಲ್ ಕಾನ್ಸ್ಟೇಬಲ್ ವಿವಿ ಪುರಂ ಪೋಲಿಸ್ ಠಾಣೆ | |
| ವಾಸ ಸ್ಥಳ | ಹೆಬ್ಬಾಳು ಪೋಲಿಸ್ ಕ್ವಾಟರ್ಸ್ | |

**ಮುಖ್ಯ ವಿಚಾರಣೆ – ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು 2017 ರಿಂದ 2024 ಜುಲೈ ರವರೆಗೆ ನಾನು ಮೇಟಗಳ್ಳಿ ಪೋಲಿಸ್ ಠಾಣೆಯಲ್ಲಿ ಸಿಪಿಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 25.05.2023 ರಂದುಠಾಣಾ ಪಿ ಎಸ್ ಐ ರವರು ನನ್ನನ್ನು ಹಾಗೂ ಚಾಸಾ–24 ಮಾಣಿತ್ ರವರನ್ನು ಕ್ರೈಮ್ ನಂ 23/19 ರಲ್ಲಿನ ಆರೋಪಿ ಪತ್ತೆಗಾಗಿ ನೇಮಕ ಮಾಡಿದ್ದು, ಆ ದಿನ ಸಿದ್ದಲಿಂಗಪುರ, ನಾಗನಳ್ಳಿ , ಲಕ್ಕೀಪುರ, ವರುಣ ನಾಲೆ ಯೇರಿ ಕಡೆಗಳಲ್ಲಿ ದಸ್ತು ಮಾಡಿ ಆರೋಪಿತ ಬಗ್ಗೆ ಭಾತ್ಮೀದಾರರಿಂದ ಮಾಹಿತಿ ಸಂಗ್ರಹಿಸುವಾಗ ಭಾತ್ಮೀದಾರರ ಖಚಿತ ಮಾಹಿತಿಯ ಮೇರೆಗೆ ಆರೋಪಿಯ ರೈಲ್ವೆ ಸ್ಟೇಷನ್ ಅಥವಾ ಬಸ್ ಸ್ಟಾಂಡ್ ಬಳಿ ಹೋಗಿರುವ ಬಗ್ಗೆ ಮಾಹಿತಿ ಬಂದಿದ್ದು, ಅದರಂಇತೆ ನಾವುಗಳು ಕೆ ಆರ್ ಆಸ್ಪತ್ರೆಯ ಬಳಿ ಹೋಗುವಾಗ ಆರೋಪಿ ಮೋಹನ್ ಕುಮಾರ್ ಕೆ ಆರ್ ಆಸ್ಪತ್ರೆಯ ಬಳಿ ಸಿಕ್ಕಿದ್ದು, ಆತನನ್ನು ಹಿಡಿದು ಹೆಸರು ವಿಳಾಸ

ಕೇಳಿದಾಗ ಮೋಹನ್ ಕುಮಾರ್ ಅಲಿಯಾಸ್ ಮನು, ತಂದೇ ಶಾಂತೇಗೌಡ ಎಂದು ಹೇಳಿದ್ದ. ದಿನಾಂಕ 24.05.2023 ರಂದು ಸಿದ್ದಲಿಂಗಪುರ ಗ್ರಾಮದ ರಾಘವೇಂದ್ರ ಬೇಕರಿಯಲ್ಲಿ ರಾಡಿನಿಂದ ಹೊಡೆದು ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿದ್ದರಿಂದ ಆತನನ್ನು ಮದ್ಯಾಹ್ನ 3.00 ಗಂಟೆಗೆ ಠಾಣೆಗೆ ತಂದು ಹಾಜರುಪಡಿಸಿದ್ದೆ ವು . ಕೋರ್ಟ್ ಮುಂದಿರುವ ಆರೋಪಿತನೇ ಆ ದಿನ ಹಾಜುರಪಡಿಸಿದ ಮೋಹನ್ ಕುಮಾರ್ ಇರುತ್ತಾನೆ.

**<u>ಪಾಟೀ ಸವಾಲು – ಆರೋಪಿಗಳ ಪರ ಶ್ರೀಮತಿ ಎಸ್ ಆರ್ ವಕೀಲರಿಂದ</u>** :

ಆ ದಿನ ನನ್ನೊಂದಿಗೆ ಚಾಸಾ–24 ಮಾಣಿಕ ಸಹ ಆರೋಪಿ ಪತ್ತೆಗೆ ಬಂದಿದ್ದರು. ಆ ದಿನ ನಾವು ಯಾವ ಸ್ಥಳಕ್ಕೆ ಹೋಗಿದ್ದೊ ಎಂದು ಡೈರಿಯಲ್ಲಿ ನಮೂದು ಮಾಡಿಲ್ಲ. ಆರೋಪಿ ಪತ್ತೆ ಮಾಡಿದ ಸ್ಥಳದಲ್ಲಿ ನಾವು ಮಹಜರ್ ಮಾಡಿಲ್ಲ. ಪಿರ್ಯಾದುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸ ಇ ಎ ಒ

4 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮೈಸೂರು.